# ಮಾದರಿ ಪ್ರಶ್ನೆ ಪತ್ರಿಕೆ – 03

**ತರಗತಿ: 10** **2022-23** **ಗರಿಷ್ಠ ಅಂಕಗಳು: 80**

**ವಿಷಯ: ಸಮಾಜ ವಿಜ್ಞಾನ** **ಅವಧಿ: 3ಗಂಟೆ 15ನಿಮಿಷ**

**I.** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ. **8 X 1 =8**

**1.** ಫ್ರಾನ್ಸಿಸ್ಕೊ ಡಿ ಆಲ್ಮೇಡ ನೀಲಿ ನೀರಿನ ನೀತಿಯನ್ನು ಜಾರಿಗೆ ತರಲು ಕಾರಣ

A) ಭೂಮಿಯ ಮೇಲಿನ ಏಕಸ್ವಾಮ್ಯಕಾಗಿ ಸೈನ್ಯಶಕ್ತಿಯನ್ನು ಬಲಪಡಿಸುವುದು.

B) ಸಮುದ್ರದ ಮೇಲಿನ ಏಕಸ್ವಾಮ್ಯಕಾಗಿ ನೌಕಾಶಕ್ತಿಯನ್ನು ಬಲಪಡಿಸುವುದು.

C) ನೀಲಿ ಬೆಳೆಗಳನ್ನು ಬೆಳೆಯುವುದಕ್ಕೆ ಪ್ರೋತ್ಸಾಹ ನೀಡುವುದು.

D) ಸಮುದ್ರದ ನೀರು ನೀಲಿ ಎಂದು ಮನದಟ್ಟು ಮಾಡುವುದು.

**2.** ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ದವನು

A) ಮುಸೋಲಿನಿ B) ಹಿಟ್ಲರ್ C) ಬಿ.ಚಾಮರಾಜ ಅರಸು D) ಸ್ಟ್ಯಾಲಿನ್

**3.** ಭಾರತ-ಚೀನಾ ದೇಶಗಳ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ.

A) ಆರ್ಥಿಕ ತತ್ವ ಮತ್ತು ರಾಜಕೀಯ ತತ್ವ

B) ಕಮ್ಯೂನಿಸ್ಟ್ ತತ್ವ ಮತ್ತು ಹಿಂದೂ ತತ್ವ

C) ಪಂಚಶೀಲ ತತ್ವ ಮತ್ತು ಹಿಂದೂ-ಚೀನಿ ಭಾಯಿಭಾಯಿ ತತ್ವ

D) ಪ್ರಜಾಪ್ರಭುತ್ವ ತತ್ವ ಮತ್ತು ಸಮಾನತೆಯ ತತ್ವ

**4.** ಸಂವಿಧಾನದ ಈ ವಿಧಿಯು ಅಸ್ಪೃಶ್ಯತೆ ಆಚರಣೆಯು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ.

A) 15ನೇ ವಿಧಿ B) 17ನೇ ವಿಧಿ C) 24ನೇ ವಿಧಿ D) 51ನೇ ವಿಧಿ

**5.** ಶಿಕ್ಷಣ ಹಕ್ಕು ಕಾಯ್ದೆಯು ಜಾರಿಗೆ ಬಂದ ವರ್ಷ

A) 1961 B) 1976 C) 1986 D) 2009

**6.** ಡೆಕ್ಕನ್ ಟ್ರಾಪ್ ಎಂದರೆ

A) ಕಪ್ಪು ಮಣ್ಣಿನ ಪ್ರದೇಶ B) ಕೆಂಪು ಮಣ್ಣಿನ ಪ್ರದೇಶ

C) ಲ್ಯಾಟರೈಟ್ ಮಣ್ಣಿನ ಪ್ರದೇಶ D) ಮೆಕ್ಕಲು ಸಂಚಯನ ಮಣ್ಣಿನ ಪ್ರದೇಶ

**7.** ಪ್ರತ್ಯಕ್ಷ ತೆರಿಗೆಗೆ ಒಂದು ಉದಾಹರಣೆ

A) ಕೇಂದ್ರ ಅಬಕಾರಿ ತೆರಿಗೆ B) ವರಮಾನ ತೆರಿಗೆ

C) ವಿದೇಶಿ ಪ್ರವಾಸಿಗರ ಮೇಲಿನ ತೆರಿಗೆ D) ಸೇವಾ ತೆರಿಗೆ

**8.** ಮಾರುಕಟ್ಟೆಯ ರಾಜ

A) ವ್ಯಾಪಾರಿ B) ಪೂರೈಕೆದಾರ C) ದಲ್ಲಾಳಿ D) ಗ್ರಾಹಕ

**II.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **8 X 1 =8**

**9.** ಭಾರತ ಮತ್ತು ಯುರೋಪ್ ನಡುವೆ ಹೊಸ ಜಲಮಾರ್ಗವನ್ನು ಕಂಡುಹಿಡಿದವನು ಯಾರು?

**10.** ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್‌ನ್ನು ಏಕೆ ಸ್ಥಾಪಿಸಿದರು?

**11.** ನಿಶ್ಯಸ್ತ್ರೀಕರಣ ಎಂದರೇನು?

**12.** 'ಮಾನವ ಕುಲ ತಾನೊಂದೇ ವಲಂ' ಎಂದು ಹೇಳಿದವರು ಯಾರು?

**13.** ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳನ್ನು ಏನೆಂದು ಕರೆಯುತ್ತಾರೆ?

**14.** ಬೆಂಗಳೂರನ್ನು ಭಾರತದ 'ಸಿಲಿಕಾನ್ ಸಿಟಿ' ಎಂದು ಕರೆಯುತ್ತಾರೆ. ಏಕೆ?

**15.** ಭಾರತದ ಹಣಕಾಸು ವರ್ಷದ ಅವಧಿ ಯಾವುದು?

**16.** ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ?

SSLF DIGITAL GROUP

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ : 8 X 2 =16**

**17.** ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳೇನು?

**18.** ಹೈದರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನಗೊಂಡದ್ದು ಹೇಗೆ?

**19.** ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು?

**ಅಥವಾ**

ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳ ಪರಿಹಾರದಲ್ಲಿ ಐ.ಎಂ.ಎಫ್.ನ ಪಾತ್ರವನ್ನು ವಿವರಿಸಿ.

**20.** ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳೇನು?

**ಅಥವಾ**

ದೊಂಬಿಯು ಒಂದು ಸಾಮಾಜ ಘಾತುಕ ಚಟುವಟಿಕೆ. ಏಕೆ?

**21.** ಭಾರತದ ವ್ಯವಸಾಯವು 'ಮಾನ್ಸೂನ್ ಜೊತೆಯಲ್ಲಿ ಆಡುವ ಜೂಜಾಟ'ವಾಗಿದೆ. ಚರ್ಚಿಸಿರಿ.

**22.** ಅಸಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ವಿವರಿಸಿ.

**23.** ಸುಗ್ಗಿ ಪೂರ್ವ ತಂತ್ರಜ್ಞಾನವು ಸುಗ್ಗಿ ನಂತರದ ತಂತ್ರಜ್ಞಾನಕ್ಕಿಂತ ಹೇಗೆ ಭಿನ್ನವಾಗಿದೆ?

**24.** ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದಾಗುವ ಅನುಕೂಲಗಳಾವುವು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ : 9 X 3 =27**

**25.** ಬ್ರಿಟಿಷರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?

**26.** ಚಿಕ್ಕದೇವರಾಜ ಒಡೆಯರ್ ಅವರ ಸಾಧನೆಗಳನ್ನು ವಿವರಿಸಿ.

**ಅಥವಾ**

ಜ್ಯೋತಿಭಾ ಫುಲೆಯವರ ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.

**27.** 1857ರ ಹೋರಾಟದ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು?

**28.** ಭದ್ರತಾ ಸಮಿತಿಯ ರಚನೆ ಮತ್ತು ಅಧಿಕಾರ ಕಾರ್ಯಗಳನ್ನು ವಿವರಿಸಿ.

**29.** ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗು. ಸಮರ್ಥಿಸಿ.

**30.** ದೇಶದ ತ್ವರಿತಗತಿಯ ಆರ್ಥಿಕ ಬೆಳವಣಿಗೆಗೆ ರಸ್ತೆಗಳು ಪ್ರಮುಖ ಪಾತ್ರವಹಿಸುತ್ತವೆ. ಹೇಗೆ?

**31.** ಸುಧಾರಿತ ತಂತ್ರಜ್ಞಾನದ ಬಳಕೆಯಿಂದ ಆದ ಬದಲಾವಣೆಗಳೇನು?

**ಅಥವಾ**

ಭೂಕಂಪದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ.

**32.** ಭಾರತದ ಆರ್ಥಿಕ ಪ್ರಗತಿಯಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಮುಖ ಪಾತ್ರ ವಹಿಸಿವೆ. ಹೇಗೆ?

**ಅಥವಾ**

ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?

**33.** ಬ್ಯಾಂಕಿನಲ್ಲಿ ಖಾತೆಯನ್ನು ತೆರೆಯುವ ವಿಧಾನಗಳಾವುವು?

**ಅಥವಾ**

ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳಾವುವು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ : 4 X 4 =16**

**34.** ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.

**35.** ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

**ಅಥವಾ**

ಎರಡನೇ ಮಹಾಯುದ್ಧಕ್ಕೆ ಕಾರಣಗಳಾವುವು?

**36.** ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**37.** ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ವಿವರಿಸಿ.

**VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

**a)** ಮಲಬಾರ್ ತೀರ **b)** ಭದ್ರಾವತಿ

**c)** ಹಿರಾಕುಡ್ **d)** ಸುಭಾಷ್‌ಚಂದ್ರ ಬೋಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ



SSLC DIGITAL GROUP